# ನಾನಾರ್ಥಕಗಳ ಅನರ್ಥಗಳು...



**ಉಚ್ಚಾರಣೆ ಒಂದೇ ರೀತಿ ಇದ್ದರೂ ಬೇರೆ ಬೇರೆ ಅರ್ಥ ಕೊಡುವ ನಾನಾರ್ಥಕ ಪದಗಳಿಂದಾಗುವ ಎಡವಟ್ಟುಗಳು ಮಾತ್ರ ಒಂದೆರಡಲ್ಲ.**

■ ಪ್ರೀತಿ ಎಮ್. ಸಂಗಮ್

ಅದೊಂದು ಭಾನುವಾರ ಬೆಳಿಗ್ಗೆ ಜಿಟಿಜಿಟಿ ಹನಿಯುತ್ತಿರುವ ಮಳೆಯಲಿ ನಿಸರ್ಗದ ಸೌಂದರ್ಯ ಸವಿಯುತ್ತಾ ಬಾಲ್ಕನಿಯಲ್ಲಿ ಹಾಯಾಗಿ ಕುಳಿತು ಮಧುರವಾದ ಹಾಡು ಕೇಳಿದರಾಯ್ತೆಂದೆನಿಸಿತು. ನನ್ನ ಹಿರಿಯ ಮಗ ಅಲ್ಲಿಯೇ ಓದುತ್ತಾ ಕುಳಿತಿದ್ದರಿಂದ ಅವನ ಅಭ್ಯಾಸಕ್ಕೆ ತೊಂದರೆ ಮಾಡುವುದು ಬೇಡವೆಂದು ಕಿರಿಯ ಮಗನಿಗೆ ಇಯರ್ ಬಡ್ಸ್ ತರೋಕೆ ಹೇಳ್ದೆ. ಆಯ್ತು, ಎಂದವನೇ ಓಡಿ ಹೋಗಿ ಇಯರ್ ಬಡ್ಸ್ ತೆಗೆದುಕೊಂಡು ಬಂದ. ಅದನ್ನು ತನ್ನ ಮುಚ್ಚಿದ ಕೈಯಲ್ಲಿ ಹಿಡಿದು, ‘ಅಮ್ಮಾ, ನೀನು ಕಣ್ಮುಚ್ಚು. ನಾನೇ ನಿನ್ನ ಕಿವಿಯಲ್ಲಿ ಹಾಕ್ತೀನಿ’ ಎಂದ.

ಸರಿ, ಎಂದು ನನ್ನ ಕಿವಿಯನ್ನು ಅವನ ಸುಪರ್ದಿಗೆ ಕೊಟ್ಟು ಕಣ್ಮುಚ್ಚಿ ಕುಳಿತೆ. ಮಧುರವಾದ ಸಂಗೀತ ಕೇಳಿಸಬೇಕಿದ್ದ ಡಿಜಿಟಲ್ ಇಯರ್ ಬಡ್ಸ್ ಬದಲು ಕಿವಿಯನ್ನು ಸ್ವಚ್ಛಗೊಳಿಸುವ ಇಯರ್ ಬಡ್ಸ್ ನನ್ನ ಕಿವಿಯ ತಮಟೆವರೆಗೂ ಸಿಗಿಸಿದಾಗ ಕಿಟಾರನೇ ಕಿರುಚಿ – ‘ಏ ಬುದ್ಧಿಗೇಡಿ, ನಾ ಕೇಳಿದ್ದು ಮ್ಯೂಸಿಕ್ ಕೇಳಸ್ಕೋಳಿಕ್ಕೆ ಇಯರ್ ಬಡ್ಸ್, ಕಿವಿ ಸ್ವಚ್ಛ ಮಾಡುವ ಇಯರ್ ಬಡ್ಸ್ ಅಲ್ಲ’ ಎಂದೆ.

ಅದಕ್ಕವನು ‘ಅಮ್ಮಾ, ನಿನಗ ಅಷ್ಟೂ ಗೊತ್ತಿಲ್ಲಾ? ಕಿವಿ ಸ್ವಚ್ಛ ಮಾಡುದಕ್ಕೂ ಇಯರ್ ಬಡ್ಸ್ ಅಂತಾರ. ಹೇಳಬೇಕಾದ್ರ ಯಾವ ಇಯರ್ ಬಡ್ಸ್ ಬೇಕು ಅಂತ ಸರಿಯಾಗಿ ಹೇಳಬೇಕಿಲ್ಲೋ’ ಅಂತ ನನಗೇ ಬುದ್ಧಿ ಹೇಳಿದ. ಸ್ವಲ್ಪ ದಿನಗಳ ಹಿಂದೆ ಇವನಿಗೆ ಹೋಮೋನಿಮ್ಸ್‌ಗಳ (ಭಿನ್ನಾರ್ಥ/ನಾನಾರ್ಥ ಪದಗಳು) ಥಿಯರಿ ಪಾಠ ಮಾಡಿದ ನನಗೆ ಅಂದು ಅವನಿಂದಲೇ ಹೋಮೋನಿಮ್ಸ್ ಪ್ರ್ಯಾಕ್ಟಿಕಲ್ ಪಾಠವಾಗಿತ್ತು.

ಒಂದು ದಿನ ಪೇಪರ್ ರದ್ದಿ ಹಾಕ್ತಾ ಇದ್ದೆ. ಮಕ್ಕಳ ಪರೀಕ್ಷೆ ಮುಗಿದಿದ್ದರಿಂದ, ಕಿರಿಯ ಮಗನನ್ನು ಕುರಿತು ‘ನೋಟ್ಬುಕ್‌ನೂ ತೊಗೊಂಡ ಬಾ, ರದ್ದಿ ಹಾಕ್ತೀನಿ’ ಅಂದೆ. ಸ್ವಲ್ಪ ದಿನಗಳ ಹಿಂದೆ ಇಯರ್ ಬಡ್ಸ್‌ನಿಂದ ಆದ ಘಟನೆಯಿಂದ ನನ್ನಿಂದ ಬೈಸಿಕೊಂಡ ಅವನು ಈ ಸಲ ಸ್ವಲ್ಪ ಜಾಸ್ತಿ (?) ಬುದ್ಧಿ ಓಡಿಸಿ ಡಿಜಿಟಲ್ ಸಾಧನವಾದ ನೋಟ್ಬುಕ್ ತಂದು ನನ್ನ ಕೈಯಲ್ಲಿಟ್ಟ. ‘ನಿನ್ನ ಸ್ಕೂಲ್ ನೋಟ್ಬುಕ್ಸ್ ತೊಗೊಂಡ್ಬಾ ಅಂದ್ರ ಡಿಜಿಟಲ್ ನೋಟ್ಬುಕ್ ತೊಗೊಂಡ ಬರ್ತಿಯಲಾ, ಇಷ್ಟ ಕ್ವಾಸ್ಟ್ಲಿ ಡಿಜಿಟಲ್ ನೋಟ್ಬುಕ್ ರದ್ದಿ ಹಾಕ್ತಾರೇನು, ಇದು ಕೆಟ್ಟ ಕೆಲಸಕ್ಕ ಬರದಿದ್ದರೂ ರದ್ದಿ ಹಾಕ್ಲಿಕ್ಕ ಆಗಾಂಗಿಲ್ಲ. ಇದಕ್ಕ ಕೊಟ್ಟ ದುಡ್ಡಿಗಾದ್ರೂ ಕಿಮ್ಮತ್ ಕೊಡ್ಲಿಕ್ಕ ಇದನ್ನ ಶೋಕೇಸ್ ನಾಗ ಇಟ್ಟು ದಿನಾಲೂ ಊದಿನಕಡ್ಡಿ ಹಚ್ಚಿ ಪೂಜಾ ಮಾಡಬೇಕಾಗ್ತದ’ ಎಂದಾಗ ಈ ನೋಟ್ಬುಕ್ ಎನ್ನುವ ಹೋಮೋನಿಮ್ಸ್‌ನಿಂದ ಮತ್ತೆ ಕನ್‌ಫ್ಯೂಸ್ ಆಗುವ ಪ್ರಸಂಗ ಅವನದಾಗಿತ್ತು.

ಕೆಲವು ವರ್ಷಗಳ ಹಿಂದೆ ಒಂದು ಶಾಲೆಯಲ್ಲಿ ಓರಿಯೆಂಟೇಶನ್ ಪ್ರೋಗ್ರಾಂಗೆ ಹೋಗಿದ್ದೆ. ಆ ಶಾಲೆಯವರು ತಾವು ಮಕ್ಕಳಿಗೆ ಒದಗಿಸುವ ಸೌಲಭ್ಯಗಳ ಬಗ್ಗೆ ಹೇಳುತ್ತಿದ್ದರು. ‘ನಮ್ಮ ಶಾಲೆಯಲ್ಲಿ ಡಿಜಿಟಲ್ ಕ್ಲಾಸ್‌ರೂಮ್ ಸೌಲಭ್ಯವಿದ್ದು ಪ್ರತಿಯೊಂದು ವಿದ್ಯಾರ್ಥಿಗೂ ಟ್ಯಾಬ್ಲೆಟ್ ಒದಗಿಸುತ್ತೇವೆ, ಇದರಿಂದ ಅವರ ಕಲಿಕಾ ಸಾಮರ್ಥ್ಯ ಹೆಚ್ಚುತ್ತದೆ’ ಎಂದರು. ಪಾಲಕರ ಜೊತೆ ಬಂದ ಒಬ್ಬ ಅಜ್ಜಿ ‘ಇದೆಂಥ ಕಲಿಕಾ ವಿಧಾನ ನಿಮ್ಮದು, ಇಷ್ಟು ಚಿಕ್ಕಮಕ್ಕಳಿಗೆ ಪ್ರತಿದಿನವೂ ಟ್ಯಾಬ್ಲೆಟ್ ಕೊಟ್ಟರೆ ಅವರ ಆರೋಗ್ಯದ ಮೇಲೆ ಏನು ಪರಿಣಾಮ ಆಗಲಿಕ್ಕಿಲ್ಲ. ಔಷಧಗಳಿಂದ ಮಕ್ಕಳ ಕಲಿಕಾ ಸಾಮರ್ಥ್ಯ ಹೆಚ್ಚಿಸುವುದು ಎಷ್ಟು ಸರಿ. ಈ ಔಷಧಗಳ ಅಡ್ಡ ಪರಿಣಾಮ ನಿಮಗೆ ಗೊತ್ತಿಲ್ಲವೇ?’ ಎಂದು ಶಾಲೆಯ ಮ್ಯಾನೇಜ್ಮೆಂಟನ್ನು ತರಾಟೆಗೆ ತೆಗೆದುಕೊಂಡಾಗ ಎಲ್ಲ ಪಾಲಕರು ಟೇಬಲ್ ಕುಟ್ಟಿ ಕುಟ್ಟಿ ನಕ್ಕಿದ್ದೇ ನಕ್ಕಿದ್ದು. ಟೇಬಲ್ ಕುಟ್ಟಿದ್ದು ತನ್ನ ಮಾತಿಗೆ ತಟ್ಟಿದ ಚಪ್ಪಾಳೆ ಎಂದು ತಿಳಿದು ಇದರಿಂದ ಪುಳಕಿತಳಾದ ಅಜ್ಜಿ ರಾಕ್ಸ್ ಅಂಡ್ ಮ್ಯಾನೇಜ್ಮೆಂಟ್ ಶಾಕ್ಸ್.

ಹಳ್ಳಿಗಳಲ್ಲಿ ಪ್ರತಿಯೊಂದು ಬೀದಿಗೂ ಒಂದು ಆಂಜನೇಯನ ಗುಡಿ ಇರುವ ಹಾಗೆ ಬೆಂಗಳೂರಿನ ಬೀದಿಬೀದಿಗೂ ಒಂದು ಡಯಾಗ್ನಾಸ್ಟಿಕ್